


### ಚ್ಚಿ ಬೀಳಿಸಿದ ಲೇಖನ

'ಆನ್‌ಲೈನ್‌ನಲ್ಲಿ ನಾವು ಮತ್ತು ಮಕ್ಕಳು ಎಷ್ಟು ಸುರಕ್ಷಿತ' ದಿಲಾವರ್ ರಾಮದುರ್ಗ ಅವರ ಮುಖಪುಟ ಲೇಖನ ಓದಿ ಬೆಚ್ಚಿ ಬೀಳುವಂತಾಯಿತು. ಹೈಸ್ಕೂಲ್ ಮಕ್ಕಳಿಗೆ ಆನ್ ಲೈನ್ ಏಕೆ ಬೇಕು? ಬೇಕಾದ ಮಾಹಿತಿಯನ್ನು ಪುಸ್ತಕಗಳಿಂದ ಪಡೆಯಬಹುದಲ್ಲ?

– ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ

### ಮಂಗನ ಕೈಗೆ ಮಾಣಿಕ್ಯ!

ಡಿಜಿಟಲ್ ಕ್ಯಾಮೆರಾ, ಮೊಬೈಲ್, ಇಂಟರ್ನೆಟ್, ಲ್ಯಾಪ್‌ಟಾಪ್, ಆನ್‌ಲೈನ್ ಎಂಬ ಪದಗಳು ಕೆಲವು ವರ್ಷಗಳಿಂದ ಯಾರಿಗೂ ಗೊತ್ತೇ ಇರಲಿಲ್ಲ. ಇತ್ತೀಚಿನ ಜನರಿಗೆ ಮುಕ್ತವಾಗಿ, ಅಗ್ಗವಾಗಿ ಲಭ್ಯವಾಗುತ್ತಿರುವ ಈ ಸೌಕರ್ಯಗಳು ಎರಡಲುಗಿನ ಕತ್ತಿಗಳಾಗಿವೆ. ಹೆಂಡ ಕುಡಿದ ಕಪಿಗೆ ಚೇಳು ಕುಟುಕಿದಂತೆ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಮನಸೂರೆಗೊಂಡ ಲೇಖನಗಳು

ದಾಹ ನೀಗಿಸುವ ಪನ್ನೇರಳೆ, ಬಹು ಉಪಯೋಗಿ ಕವಳಿ, ಅಮೃತಬಳ್ಳಿಯ ಕಷಾಯ, ಮೆಂತೆ ಮಜ್ಜಿಗೆ ಮುಂತಾದ ಲೇಖನಗಳು ಓದುಗರ ಮನಸ್ಸನ್ನು ಸೂರೆಗೊಂಡವು.

–ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ

### ಅಪೂರ್ಣ ಮಾಹಿತಿ

ಗೀತಸದಾ ಮೋಂತಿಮಾರು ಅವರ ಪನ್ನೇರಳೆ ಕುರಿತು ಲೇಖನ ಅಪೂರ್ಣವಾಗಿದೆ. ಚಿತ್ರದಲ್ಲಿ ಪನ್ನೇರಳೆ ಯೊಂದಿಗೆ ಭಿನ್ನವಾದ ಇನ್ನೊಂದು ಹಣ್ಣು (ಕೊಂಕಣಿಯಲ್ಲಿ 'ಜಾಂಬ' ಫಲವೆನ್ನುತ್ತೇವೆ) ಪರಿಚಯಿಸಿದ್ದು ಅದರ ಬಗ್ಗೆ ವಿವರಣೆಯಿಲ್ಲ.

–ಹೆಚ್. ಕೇಶವ ಪ್ರಭು, ಶಿವಮೊಗ್ಗ

### ಅಲ್ಲಿ ಕೆಲಸ ಇಲ್ಲ, ಇಲ್ಲಿ ಕೆಲಸಗಾರರಿಲ್ಲ

'ನಿಮ್ಮ ಪುಟ'ದಲ್ಲಿ 'ಕೆಲಸ ಇದೆಯಾ?' ಈರಣ್ಣ ಬೆಂಗಾಲಿ ಬರಹ ಓದಿ ಆಶ್ಚರ್ಯವಾಯಿತು. ರಾಯಚೂರಿನಲ್ಲಿ 'ಕೆಲಸ'ದ ಅಭಾವವಾದರೆ ಕರಾವಳಿ ಕರ್ನಾಟಕ ಮತ್ತು ಕೇರಳದಲ್ಲಿ 'ಕೆಲಸದವರ ಅಭಾವ!' ಕಾಸರಗೋಡಿನಲ್ಲಿ ಸಾಮಾನ್ಯ ಕೂಲಿಯವರಿಗೆ ದಿನಕ್ಕೆ ಕನಿಷ್ಠ 300–400 ರೂ. ಬಡಗಿ, ಅಡಿಕೆ ಮರ ಏರುವವರಿಗೆ ದಿನಕ್ಕೆ 1000 ರೂ. ಇಷ್ಟು ದುಡ್ಡು ತೆತ್ತರೂ ನಮ್ಮ ಭಾಗದಲ್ಲಿ ಕೂಲಿಯವರು ದೊರೆಯುವುದಿಲ್ಲ!

–ಕಿಶೋರ್‌ಕುಮಾರ್ ಪಾಂಡಿ, ಕಾಸರಗೋಡು

### ಹೇಗಿದ್ದ? ಹೇಗಾದ?

'ಹೇಗಿದ್ದ 'ಪಂಟರ್' ಹೇಗಾದ ಗೊತ್ತಾ?' ಕೆ. ಓಂಕಾರ ಮೂರ್ತಿಯವರ ಲೇಖನ ಯಶಸ್ವಿ ವ್ಯಕ್ತಿಯ ಪೂರ್ವಾಪರ ತಿಳಿಸಿತು.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಅರ್ಥಪೂರ್ಣ ವಿಶ್ಲೇಷಣೆ

ವಿಚಾರ ಲಹರಿಯಲ್ಲಿ ಶಿಕಾಕು ಸರ್ವಜ್ಞ ಮತ್ತು ಸರ್ವಜ್ಞತೆಯ ಬಗೆಗೆ ಬರೆದಿರುವುದು ಇದರ ಬಗೆಗೆ ಹೊಸದಾಗಿ ಚಿಂತಿಸುವಂತೆ ಮಾಡಿದೆ. ಸರ್ವಜ್ಞ ಎಂದರೆ ನಮ್ಮ ಕನ್ನಡದ ತ್ರಿಪದಿಕಾರ ಎಂದು ಮಾತ್ರವೇ ತಿಳಿದುಕೊಂಡಿದ್ದ ನಮಗೆ, ಈ ಪದಕ್ಕೆ ಇರುವ ವಿಶಾಲ ಅರ್ಥದ ಬಗೆಗೆ ಶಿಕಾಕು ನೀಡಿರುವ ವ್ಯಾಖ್ಯಾನ ಓದಿ ನಾನು ಅರಿತುಕೊಳ್ಳಬೇಕಾದುದು ಸಾಕಷ್ಟಿದೆ ಎನಿಸಿತು. ನಿಜಕ್ಕೂ ಅರ್ಥಪೂರ್ಣ ವಿಶ್ಲೇಷಣೆ ಇದು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಮಾರ್ಮಿಕ ಕಥೆ

ಕ್ರಿಕೆಟ್ ಎಂಬ ಜೂಜಾಟದ ಬಗ್ಗೆ ಭಾರತೀಯರಿಗೆ ಇರುವ ಹುಚ್ಚು ವ್ಯಾಮೋಹವನ್ನು ಕಂನಾಡಿಗಾ ನಾರಾಯಣ ಅವರ 'ಆಲ್‌ರೌಂಡರ್' ಕಥೆ ಮಾರ್ಮಿಕವಾಗಿ ಚಿತ್ರಿಸಿದೆ. ಇದೊಂದು ಒಳ್ಳೆಯ ಕಥೆ.

ಕೊಹಿಮ, ಬಸರಕೋಡು/ ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

### ಹೀಗೂ ಉಂಟೆ?

ಮಾ. 8ರ ಸುಖೀಭವ 'ಹೀಗೂ ಉಂಟೇ?' ಇದು ತೀರಾ ಕಾಲ್ಪನಿಕ ಇರಬಹುದು ಎನಿಸಿತು.

ಆದರೆ ಮಾ. 15ರ ಸಂಚಿಕೆ ಓದುವಾಗ ಡಾ. ಛೆಬ್ಬಿಯವರ ಉತ್ತರ ಮತ್ತು ಪತ್ರ ಸಾಚಾ ಇರಬಹುದು ಎಂದು ಸಮಾಧಾನವಾಯಿತು.

–ಕುಕ್ಕೆ ಸುಬ್ರಹ್ಮಣ್ಯ, ಬೆಂಗಳೂರು

### ನೆಮ್ಮದಿ ನೀಡುವ ಸುಖೀಭವ

ಡಾ. ವಿನೋದ ಛೆಬ್ಬಿಯವರು ಲೈಂಗಿಕ ಸಮಸ್ಯೆಗಳ ಬಗ್ಗೆ ಚೆನ್ನಾಗಿ ವಿವರಿಸುತ್ತಾರೆ. ಅವರ ಮಾರ್ಗದರ್ಶನ ದಿಂದ ಅನೇಕ ಸಂಸಾರಗಳು ನೆಮ್ಮದಿ ಜೀವನ ನಡೆಸುತ್ತಿವೆ.

–ತುರಗಲ್ಲ ಉಮೇಶ, ರಾಮದುರ್ಗ

### ಪ್ರಶ್ನಿಸಿದವರಿಗೆ ಉತ್ತರ ಸಾಕು

'ಸುಧಾ' ಪತ್ರಿಕೆ ಎಲ್ಲ ವರ್ಗದ ಓದುಗರಿಗೆ ಉಪಯುಕ್ತ ಮತ್ತು ಮಾರ್ಗದರ್ಶನವಾಗಿರುತ್ತದೆ. ಆದರೆ 'ಸುಖೀಭವ' ಅಂಕಣದಲ್ಲಿ ಕೆಲವೊಂದು ಪ್ರಶ್ನೆಗಳು ಕಾಲ್ಪನಿಕವಾಗಿರುತ್ತವೆ. ಅದರಲ್ಲೂ ಮಾ. 8 ರಂದು ಪ್ರಕಟವಾದ ಪ್ರಶ್ನೆಯೊಂದು ತೀರ ಅಸಹಜ ಹಾಗೂ ಸತ್ಯಕ್ಕೆ ದೂರವಾಗಿರುತ್ತದೆ. ಈ ರೀತಿಯ ಪ್ರಶ್ನೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವು ದಕ್ಕಿಂತ, ಪ್ರಶ್ನಿಸಿದ ವ್ಯಕ್ತಿಗೆ ಮಾತ್ರ ಉತ್ತರಿಸಿದರೆ ಪತ್ರಿಕೆಯ ಗೌರವ ಉಳಿಯುತ್ತದೆ.

–ಕೆ.ಎಸ್. ವಿಠಲ್‌ರಾವ್, ಜ್ಯೋತಿ ಉಮೇಶ್, ಬೆಂಗಳೂರು

### ಪ್ರತಿಭೆ ಯಾರ ಸ್ವತ್ತಲ್ಲ

ಪ್ರತಿಭೆ ಯಾರ ಸೊತ್ತೂ ಅಲ್ಲ ಎಂಬುದಕ್ಕೆ ಕ್ರಿಕೆಟಿಗ ಉಮೇಶ್ ಯಾದವ್‌ರ ಸಾಧನೆಯೇ ಸಾಕ್ಷಿ.

ಸುರೇಶ ಅಂಗಡಿ, ಹೂವಿನ ಹಡಗಲಿ

### ಕವಳಿ ಹಣ್ಣಿನ ವಿಪುಲ ಮಾಹಿತಿ

ಕವಳಿ ಹಣ್ಣಿನ ಬಗ್ಗೆ ಓದಿದಾಗ ಬಾಲ್ಯದಲ್ಲಿ ಹಣ್ಣನ್ನು ಅರಸುತ್ತ ಸುತ್ತುತ್ತಿದ್ದುದು ನೆನಪಾಯಿತು. ಲೇಖಕರು ಕವಳಿ ಕಾಯಿಯ ವಿವಿಧ ಪ್ರಯೋಜನಗಳನ್ನು ತಿಳಿಸಿದ್ದಾರೆ.

– ಸೌದಾಮನೀ ಪ್ರಭಾಕರ, ಮೈಸೂರು, ಎಲ್.ಸ್ವರ್ಣಲತಾ, ಹುಬ್ಬಳ್ಳಿ

### ತಪ್ಪು ಮಾಹಿತಿ

'ನಿಮ್ಮ ಪುಟ'ದಲ್ಲಿ 'ಇನ್ನೂ ಎತ್ತರ ಬೆಳೆವೆಯಾ?' ಚಿತ್ರಬರಹದಲ್ಲಿ ಓಂಕಾರಯ್ಯ ತವನಿಧಿಯವರು ಈ ಬಿಳಿ ಎಕ್ಕೆ ಗಿಡ ಯುಫರ್ಬಿಯೇಸಿ ಕುಟುಂಬಕ್ಕೆ ಸೇರಿದುದು ಎಂದು ಬರೆದಿದ್ದಾರೆ. ಇದು ತಪ್ಪು. ಈ ಗಿಡ ಅಸ್ಕ್ಲಿಪಿಯಾಡಸೀ (asklepiadaceae) ಕುಟುಂಬಕ್ಕೆ ಸೇರಿದೆ. ಎರಡೂ ಕುಟುಂಬದ ಸಸ್ಯಗಳು ಬಿಳಿಯ ಹಾಲು (latex) ಹೊಂದಿರುವುದರಿಂದ ಈ ತಪ್ಪುಗ್ರಹಿಕೆಯಾಗಿರಬಹುದು.

–ರಶ್ಮಿ ಶ್ರೀನಿವಾಸ್, ಬೆಂಗಳೂರು



